## 2

# ಆದಿಯಲ್ಲಿ

*ಆ ಮೇಲೆ ದೇವರು - ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಆಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆ ತನಮಾಡಲಿ ಅಂದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು. ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು (ಆದಿಕಾಂಡ 1:26, 27).*

ನಮ್ಮ ಪಾಠದ ಮುಖ್ಯ ಅಧ್ಯಾಯನವನ್ನು ನಾವು ಆಧಿಕಾಂಡದ ಪುಸ್ತಕದಿಂದಲೇ ಪ್ರಾರಂಭ ಮಾಡೋಣ. ಸ್ತ್ರೀಯರ ಕುರಿತಾದ, ಎರಡು ಪ್ರಾಮುಖ್ಯವಾದ ದೇವರ ಯೋಜನೆಗಳನ್ನು ಆದಿಕಾಂಡ 1:26, 27ರಲ್ಲಿ ನೋಡುತ್ತೇವೆ. ಮೊದಲನೆಯದಾಗಿ, *"ಆದಾಮ"* ಎಂಬ ಇಬ್ರಿಯ ಪದವನ್ನು "ಮಾನವ" ಎಂಬುದಾಗಿ ತರ್ಜುಮೆ ಮಾಡಲಾಗಿದೆ. ಈ ಎರಡು ವಚನಗಳಲ್ಲಿ "ಮನುಷ್ಯ" ಎಂಬ ಸಾಮಾನ್ಯ ಯೋಚನೆಯನ್ನು ಗಮನಿಸುತ್ತೇವೆ. ದೇವರು ಹೇಳಿದ್ದು "ನಾವು ಮನುಷ್ಯನನ್ನು ಸೃಷ್ಟಿ ಮಾಡೋಣ [ಆದಾಮ]"; "ಅವರನ್ನು ಉಂಟು ಮಾಡಿದನು" ಎಂಬ ಮುಂದಿನ ವ್ಯಾಖ್ಯಾನವಿರುತ್ತದೆ. ಅವರನ್ನು ಗಂಡು ಹೆಣ್ಣನ್ನಾಗಿ ಉಂಟು ಮಾಡಿದನು. "ಮನುಷ್ಯ" ಎಂಬ ಪದದ ಬದಲಾಗಿ ಒಂದು ವೇಳೆ "ಗಂಡು" ಎಂಬುದಾಗಿ ಇದ್ದರೆ, ಇಬ್ರಿಯ ಭಾಷೆಯಲ್ಲಿ "ಇಶ್" (ಎಂಬ ಪದದ ಅರ್ಥ "ಗಂಡು" ಎಂಬುದಾಗಿ ಅಥವಾ "ಗಂಡನು" ಅಥವಾ ಒಬ್ಬ ವ್ಯಕ್ತಿ) ಎಂದು ಉಪಯೋಗಿಸಲಾಗಿದೆ. ಇಬ್ರಿಯ ಪದದಲ್ಲಿರುವ ವ್ಯತ್ಯಾಸವನ್ನು ನಾವು ತಿಳಿದುಕೊಂಡ ನಂತರ, ಜಲಚರಗಳನ್ನು, ಪಕ್ಷಿಗಳನ್ನು, ಹಸುಗಳನ್ನು ಎಲ್ಲಾ ಹರಿದಾಡುವ ಕ್ರಿಮಿಗಳನ್ನು ಆಳುಗಳನ್ನು ಅಧಿಕಾರವನ್ನು ಗಂಡಸಿಗೆ ನೀಡುವದು ಮಾತ್ರವಲ್ಲದೆ, ಆದಿಕಾಂಡ 1:28ರಲ್ಲಿ ಈ ಅಧಿಕಾರವನ್ನು *ಆದಾಮನಿಗೆ* - ಅಂದರೆ ಜನರಿಗೆ, ಅದರ ಅರ್ಥ "ಸ್ತ್ರೀಯರನ್ನು" ಸಹ ಇದರಲ್ಲಿ ಸೇರಿಸಲಾಗಿದೆ. ದೇವರು, ತಾನು ಪುರುಷರಿಗಾಗಿ ಉಂಟು ಮಾಡಿದ ಆಡಳಿತವನ್ನೇ ಸ್ತ್ರೀಯರಿಗೂ, ನೀಡಿದ್ದಾನೆ. ಎಲ್ಲದರ ಮೇಲೆ ಆಡಳಿತ ನಡೆಸುವದಕ್ಕೆ ಸ್ತ್ರೀಯರಿಗೂ, ಪುರುಷರಿಗೂ ಸಮಾನವಾದ ಅಧಿಕಾರವನ್ನು ದೇವರು ನೀಡಿದ್ದಾನೆ.

ಎರಡನೆಯದಾಗಿ, "ಗಂಡಸರನ್ನೂ" ಮತ್ತು "ಹೆಂಗಸರನ್ನೂ" ದೇವರು ತನ್ನ ಹೋಲಿಕೆಗೆ ಸರಿಯಾಗಿ ಉಂಟುಮಾಡಿದ್ದಾನೆ. ದೇವರು ಆತ್ಮ ಸ್ವರೂಪನಾಗಿರುವದರಿಂದ (ಯೋಹಾನ 4:23, 24), ಆತನು ಬಾಹ್ಯ ಶರೀರವನ್ನು ಹೊಂದಿರುವದಿಲ್ಲ, ಇದರ ಅರ್ಥ ದೇವರು ನಮ್ಮನ್ನು ಬಾಹ್ಯ ಶಾರೀರದಂತೆ ಉಂಟುಮಾಡಲಿಲ್ಲ. ಈ ವರ್ತಮಾನಕಾಲದಲ್ಲಿ ನಮ್ಮ ದೇಹಗಳು "ಭೂಮಿಗೆ ಸಂಬಂಧಪಡುವ ಸ್ವರೂಪದಲ್ಲಿರುತ್ತವೆ," ಅಂದರೆ ನಮ್ಮ ಬಾಹ್ಯ ಶರೀರವು ದೇವರ ಸ್ವರೂಪವನ್ನು ಹೊಂದಿರುವದಿಲ್ಲ. ನಾವು ಪುನರುತ್ಥಾನವಾಗುವಾಗ "ಪರಲೋಕ ಸಂಬಂಧವಾದ ಸ್ವರೂಪವನ್ನು ಪಡೆದುಕೊಳ್ಳುತ್ತೇವೆ" (1 ಕೊರಿಂಥ 15:49). ಆ ಸಮಯದಲ್ಲಿ "ಆತ್ಮೀಕ ದೇಹವಾಗುತ್ತವೆ" (1 ಕೊರಿಂಥ 15:44) ದೇವರ ಹಾಗೂ ಯೇಸುವಿನ ಆತ್ಮಿಕ ದೇಹದಂತಿರುತ್ತವೆ (1 ಯೋಹಾನ 3:2; ಫಿಲಿಪ್ಪಿ 3:21). ದೇವದೂತರಂತೆ

ಆತ್ಮ ಜೀವಿಗಳು (ಇಬ್ರಿಯ 1:13, 14), ಅಥವಾ ಲಿಂಗ ಬೇಧವಿಲ್ಲದವರು (ಮತ್ತಾಯ 22:30 ನೋಡಿರಿ), ಅದರ ಅರ್ಥ ದೇವರು ಆತ್ಮ ಜೀವಿ, ಲಿಂಗಬೇಧವಿಲ್ಲದವನು. ಇದು ಸತ್ಯವಾಗಿರುವದರಿಂದ, ಪುರುಷನು, ಶಾರೀರಿಕವಾಗಿಯೂ, ಆತ್ಮಿಕವಾಗಿಯೂ ದೇವರಂತೆ ಇರುವನು ಎಂದು ಭಾವಿಸಬಾರದು ಸ್ತ್ರೀಯು ಸಹ ಈ ರೀತಿ ಬಾವಿಸಿಕೊಳ್ಳಬಾರದು.

ದೇವರು ನಮ್ಮನ್ನು ತನ್ನ ಸ್ವರೂಪದಂತೆ ಉಂಟುಮಾಡಿದನು; ಆತನಿಗಿರುವ ಆತ್ಮಿಕ ಸ್ವಭಾವದಂತೆ ಮಾಡಿದನು, ಮತ್ತು ಇದರ ಜೊತೆಯಲ್ಲಿ ಜ್ಞಾನ, ಭಾವನೆ, ಸ್ಪರ್ಷಜ್ಞಾನವನ್ನೂ ನೀಡಿರುವನು. ದೇವರು ಉಂಟು ಮಾಡಿದ ಸಕಲ ಸೃಷ್ಟಿಯಲ್ಲಿ ಮಾನವನು ಮಾತ್ರ ದೇವರ ಆತ್ಮಿಕ ಸ್ವರೂಪವನ್ನು ಪಡೆದಿರುವನು. ದೇವರು ಬಲವುಳ್ಳಪುರುಷನಂತೆ, ಸ್ತ್ರೀಯನ್ನು ಉಂಟು ಮಾಡದೇ ಹೋದರೂ - ಅವರಿಬ್ಬರಿಗೂ ತನ್ನ ಸಾರೂಪ್ಯವನ್ನು ನೀಡಿರುವನು. ಆತನ ಆತ್ಮೀಕ ಸೌಂದರ್ಯವನ್ನು ಪುರುಷನಿಗೆ ನೀಡಿದನು ಮತ್ತು ಸ್ತ್ರೀಪುರುಷರ ದೈಹೀಕ ಸೌಂದರ್ಯದಲ್ಲಿ ಅವರನ್ನು ವ್ಯತ್ಯಾಸವಾಗಿ ಉಂಟುಮಾಡಿದನು. ಆತ್ಮಿಕವಾಗಿ, ಅವರನ್ನು ಸಮಾನ ಸ್ವಭಾವದಲ್ಲಿ ಉಂಟುಮಾಡಿದನು. ಅವರು ದೇವರ ಸಾರೂಪ್ಯಕ್ಕೆ ಉಂಟು ಮಾಡಲ್ಪಟ್ಟರು, ಅವರ ಆತ್ಮಿಕ ಸೌಂದರ್ಯದಲ್ಲಿ ಮೇಲ್ಮಟ್ಟ ಹಾಗೂ ಕೆಳಮಟ್ಟ ಎಂಬುದಾಗಿ ಇರುವದಿಲ್ಲ.

## ಜೀವನ ಸಂಗಾತಿಯೇ ಅಥವಾ ಸೇವಕಳೇ?

ದೇವರು ಸ್ತ್ರೀಯರನ್ನು ಪುರುಷನಿಗೆ ಸೇವೆ ಮಾಡುವ ಸಹಾಯಕಿಯರನ್ನಾಗಿ ಉಂಟು ಮಾಡಿದನೇ? ಕೆಲವರು ಕಿಂಗ್ ಜೇಮ್ಸ್ ಬೈಬಲಿನಲ್ಲಿರುವ ಅರ್ಥವನ್ನು ತಿಳುಕೊಂಡಿದ್ದಾರೆ. "ಸಹಕಾರಿಣಿ" ಆದಿಕಾಂಡ 2:18, 20ರಲ್ಲಿ ಸ್ತ್ರೀಯನ್ನು ದೇವರು ಪುರುಷರಿಗಾಗಿ ಸಹಕಾರಿಯನ್ನಾಗಿ ಉಂಟು ಮಾಡಿದನು. ಪುರುಷನ ಸಕಲ ಅಗತ್ಯಗಳನ್ನು ಪರಿಹರಿಸುವದಕ್ಕಾಗಿ ಆಕೆಯನ್ನು ಉಂಟುಮಾಡಿದನು ಎಂದು ತಿಳಿಯುವುದು, ತಪ್ಪಾದ ತಿಳುವಳಿಕೆಯಾಗಿರುತ್ತದೆ.

*"ನೆಗೆಡ್"* ಎಂಬ ಪದದ ತರ್ಜುಮೆ "ಸಂದಿಸು" "ಜೋಡಿಸು" ಅಥವಾ "ಒಪ್ಪುವ" - ಎಂಬ ಅರ್ಥ ಬಹುಶಃ "ಅನುರೂಪವಾದ" (NASBಯಲ್ಲಿ ನೀಡಿರುವ ಅರ್ಥದಂತೆ) ಅಥವಾ "ಹೋಲಿಸಬಹುದಾದ" (New King James Version)ಎಂಬ ಅರ್ಥ. "ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ, ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ" (ಆದಿಕಾಂಡ 2:23). ಎಂಬುದು ಆದಾಮ ಹವ್ವಳ ಕುರಿತಾಗಿ ಹೇಳಿದ ಅಂತಿಮ ಹೇಳಿಕೆಯಾಗಿರಬಹುದು.

ಯಾವ ಪ್ರಾಣಿಗಳು ಆದಾಮನಿಗೆ ಹೋಲಿಕೆಯಾಗಲಿಲ್ಲ; ಅವುಗಳು ಅವನಿಗೆ ಸರಿಹೊಂದುವ ಸಂಗಾತಿಗಳಾಗಲಿಲ್ಲ. ಅವನ ಆರ್ಥಿಕ ವಿಷಯಗಳಲ್ಲಿ ಪಾಲುತೆಗೆದು ಕೊಳ್ಳುವದಕ್ಕೆ ಸಾಧ್ಯವಾಗಲಿಲ್ಲ, ಸಾಮಾಜಿಕವಾಗಿ ಅವನೊಂದಿಗೆ ಬಾಗಿಗಳಾಗಲಿಲ್ಲ, ಅವನ ಜೀವನ ಸಂಗಾತಿಗಳಾಗಿ, ಸಂತತಿಯನ್ನು ನೀಡಲು ಸಾಧ್ಯವಾಗಲಿಲ್ಲ, ಆದರೆ ಅವನಿಗೆ ಸ್ತ್ರೀಯ ಅನಿವಾರ್ಯತೆ ಇತ್ತು. ಅವನ ಹಾಗೆ ದೈಹೀಕವಾಗಿಯೂ, ಜ್ಞಾನದಲ್ಲಿಯೂ, ಭಾವನಾತ್ಮಕವಾಗಿಯೂ, ಸುಂದರವಾಗಿಯೂ, ಇದ್ದು ಸ್ಪಂದಿಸುವ ವ್ಯಕ್ತಿಯ ಅವಶ್ಯ ಅವನಿಗಿತ್ತು. ಆದುದರಿಂದ ದೇವರು ಆದಾಮನಿಗಾಗಿ ಪರಿಪೂರ್ಣವಾದ ಜೀವನ ಸಂಗಾತಿಯನ್ನು ಉಂಟುಮಾಡಿದನು. ಇದರ ಮೂಲಕ ಸ್ತ್ರೀಪುರುಷರಿಬ್ಬರು ತಮ್ಮ ಅವಶ್ಯಕತೆಗಳನ್ನು ನೀಗಿಸಿಕೊಳ್ಳಲು ಸಾಧ್ಯವಾಯಿತು.

ಇಲ್ಲಿ ಪುನರಾವರ್ತನೆಯಾಗಿರುವ ಕಲ್ಪನೆ ಒಂದು ವೇಳೆ ಸತ್ಯವಾಗಿರಬಹುದು: ಆದಾಮನು ಅವಳನ್ನು ತುಳಿದು ಹಾಕುವಂತೆ, ಅವನ ಪಾದದಿಂದ ಹವ್ವಳನ್ನು ಉಂಟುಮಾಡಲಿಲ್ಲ, ಅಥವಾ ಹವ್ವಳು ಆದಾಮನ ಮೇಲೆ ಆಡಳಿತ ಮಾಡಲಿ ಎಂದು ತಲೆಯಿಂದಲೂ ಅವಳನ್ನು ಉಂಟುಮಾಡಲಿಲ್ಲ. ಆದರೆ ಅವಳನ್ನು ಆದಾಮನಿಗೆ ಜೀವನ ಸಂಗಾತಿ ಆಗಿರಬೇಕೆಂದು ಅವನ

ಪಕ್ಕೆಯಿಂದ ಅವಳನ್ನು ಉಂಟು ಮಾಡಿದನು. ಅವಳು ಆದಾಮನಿಗಿಂತ ಕೆಳಮಟ್ಟದವಳು ಅಥವಾ ಆದಾಮನು ಅವಳ ಮೇಲೆ ಆಡಳಿತ ಮಾಡುವವನು ಎಂದು ಆದಿಕಾಂಡವು ಸಲಹೆಯನ್ನು ನೀಡುತ್ತಿರುವದಿಲ್ಲ. ವಿಶೇಷವಾದ ಜೀವನದ ಒಡನಾಟಕ್ಕಾಗಿ ದೇವರು ಸ್ತ್ರೀ ಎಂಬ ಸಹಕಾರಿಣಿಯನ್ನು ಪುರುಷನಿಗಾಗಿ ಉಂಟು ಮಾಡಿದನು.

## ಸ್ವಾಭಾವಿಕವಾದ ವ್ಯವಸ್ಥೆ

ದೇವರು ಸ್ತ್ರೀಯನ್ನು ಪುರುಷನ ಸಹಭಾಗಿಯನ್ನಾಗಿ ಉಂಟು ಮಾಡಿರುವಾಗ ಇದರಲ್ಲಿ ಕೆಲವು ಕಾರ್ಯಗಳು ಅಡಕವಾಗಿವೆ. ಆದಾಮನಿಗೆ ಸಹಾಯಕನನ್ನಾಗಿ, ಇನ್ನೊಬ್ಬ ಮನುಷ್ಯನನ್ನು ದೇವರು ಉಂಟುಮಾಡದೆ, ಸ್ತ್ರೀಯನ್ನು ದೇವರು ಉಂಟು ಮಾಡಿದನು. ಮತ್ತು ಇವರ ಕುರಿತಾದ ದೇವರ ಸ್ವಾಭಾವಿಕ ವ್ಯವಸ್ಥೆ ಏನೆಂದರೆ, "ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿ ಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು" (ಆದಿಕಾಂಡ 2:24).

ಮನುಷ್ಯನಿಗೆ ಸ್ವಾಭಾವಿಕವಾದ ಜೀವನ ಸಂಗಾತಿಯಾಗಿರಬೇಕು ಎಂಬ ಉದ್ದೇಶದಿಂದ ದೇವರು ಸ್ತ್ರೀಯನ್ನು ಉಂಟು ಮಾಡಿದನೇ. ಹೊರತು ಮತ್ತೊಬ್ಬ ಸ್ತ್ರೀಗೆ ಸಹಕಾರಿಣಿಯನ್ನಾಗಿ ಉಂಟು ಮಾಡಲಿಲ್ಲ. ಪುರುಷನಿಗೆ ಲೈಂಗೀಕ ಸಂಗಾತಿಯನ್ನಾಗಿ, ದೇವರು ಪುರುಷನನ್ನು ಉಂಟು ಮಾಡಲಿಲ್ಲ. ಪುರುಷನಿಗೆ ಲೈಂಗೀಕ ಸಂಗಾತಿಯನ್ನಾಗಿ ದೇವರು ಪುರುಷನನ್ನು ಉಂಟು ಮಾಡದೇ ಸ್ತ್ರೀಯನ್ನೇ ಉಂಟು ಮಾಡಿದನು. ಇದು ದೇವರ ಸ್ವಾಭಾವಿಕವಾದ ಕ್ರಮ ಎಂದು ಪೌಲನು ತಿಳಿಸಿರುವನು ದೇವರ ಯೋಜನೆಗೆ ವಿರುದ್ಧವಾಗಿ ಅನ್ಯ ಜನರು ನಡಕೊಂಡ ವಿಷಯದಲ್ಲಿ ಪೌಲನು ಈ ರೀತಿಯಾಗಿ ತಿಳಿಸಿದ್ದಾನೆ: "... ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗ ವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡಿಸಿ ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು" (ರೋಮಾಪುರ 1:26, 27). ಮೋಶೆಯ ಮೂಲಕ ನೀಡಲ್ಪಟ್ಟ ನಿಬಂಧನೆಯು ಈ ರೀತಿ ವ್ಯಾಖ್ಯಾನಿಸಿದೆ. "ಯಾವಾನಾದರೂ ಸ್ತ್ರೀಯನ್ನು ಸಂಗಮಿಸುವಂತೆ ಪುರುಷನನ್ನು ಸಂಗಮಿಸಿದರೆ ಅವರಿಬ್ಬರೂ ಹೇಸಿಗೆಯ ಕೆಲಸವನ್ನು ಮಾಡಿದದರಿಂದ ಅವರಿಗೆ ಮರಣ ಶಿಕ್ಷೆಯಾಗ ಬೇಕು" (ಯಾಜಕಕಾಂಡ 20:13). ಜೀವನ ಸಂಗಾತಿಗಳಾ ಗುವದಕ್ಕಾಗಿ ದೇವರು ಸ್ತ್ರೀಪುರುಷರನ್ನು ಉಂಟುಮಾಡಿದ್ದಾನೆ. ಪುರುಷರಿಗೆ, ಪುರುಷರನ್ನು ಸ್ತ್ರಿಯರಿಗೆ ಸ್ತ್ರೀಯರನ್ನು ಜೀವನ ಸಂಗಾತಿಗಳಾಗಿ ದೇವರು ಉಂಟು ಮಾಡಲಿಲ್ಲ.

## ಬಾಹ್ಯ ಸೌಂದರ್ಯ ನಿರ್ದಿಷ್ಟವಾದ ಕಾರ್ಯವನ್ನು ಸೂಚಿಸುತ್ತದೆ

ಸ್ತ್ರೀ ಪುರುಷರ ಬಾಹ್ಯ ಸೌಂದರ್ಯವು ತನ್ನದೇ ಆದ ಕಾರ್ಯವನ್ನು ಹೊಂದಿರುತ್ತದೆ. 1 ಕೊರಿಂಥ 6:13ನೇ ವಚನ ಕೊರಿಂಥದಲ್ಲಿದ್ದ ಕ್ರೈಸ್ತರು ತಪ್ಪಾಗಿ ಅರ್ಥೈಸಿಕೊಂಡ ವಿಷಯವನ್ನು ಸೂಚಿಸುತ್ತದೆ. ಸರಳವಾಗಿ ಅರ್ಥವಾಗುವ ಹಾಗೆ ಪೌಲನು ಬರೆದಿದ್ದಾನೆ. "ಬೋಜನ ಪದಾರ್ಥವು ಹೊಟ್ಟೆಗಾಗಿಯೂ, ಹೊಟ್ಟೆಯು ಬೋಜನ ಪದಾರ್ಥಗಳಿಗಾಗಿಯೂ ಇರುತ್ತವೆ." ಹೊಟ್ಟೆಯ ಕಾರ್ಯವೇನು ಎಂಬುದಾಗಿ ಇದರಿಂದ ಕಂಡು ಹಿಡಿಯುತ್ತೇವೆ. ಇದೇ ರೀತಿಯಲ್ಲಿ ಮಾನವರ ದೇಹದ ಕಾರ್ಯಗಳನ್ನು ತಿಳಿದು, ದೇವರು ಉಂಟುಮಾಡಿರುವ ಸಂಗತಿಗಳ ಇತರೆ ಕಾರ್ಯಗಳೇನು ಎಂಬುದಾಗಿ ತಿಳಿದುಕೊಳ್ಳುತ್ತೇವೆ.

ಸ್ತ್ರೀ, ಪುರುಷರ ಕಾರ್ಯಗಳನ್ನು ಗಮನಿಸುವಾಗ, ದೇವರು ಅವರ ದೇಹದಲ್ಲಿ

ನಿರೂಪಿಸಿರುವ ವಿವಿಧ ರೀತಿಯಾದ ಕ್ರಿಯೆಗಳ ಕುರಿತಾಗಿ ತಿಳಿದುಕೊಳ್ಳುತ್ತೇವೆ. ಇದಕ್ಕೆ ಪ್ರಕಟನೆಯು ಅಗತ್ಯವಿಲ್ಲ, ಪುರುಷರನ್ನು ಹೊರತು ಪಡಿಸಿ ಸ್ತ್ರೀಯರು ಮಾತ್ರ ಮಕ್ಕಳನ್ನು ಹೆರಬೇಕು ಎಂಬ ನಿಯಮವಿದೆ (1 ತಿಮೊಥೆ 5:14). ಸ್ತ್ರೀ ಪುರುಷರ ಬಾಹ್ಯ ರಚನೆ ಹಾಗೂ ಸ್ವಭಾವವು ವಿಧವಿಧವಾದ ಕಾರ್ಯಗಳಿಗಾಗಿ ಮಾಡಲ್ಪಟ್ಟಿವೆ ಎಂದು ತಿಳಿಯುತ್ತೇವೆ. ಅನೇಕ ಸಾರಿ ನಮ್ಮ ಒಂದು ಅನುಕೂಲತೆಗಳಿಗಾಗಿ ಸ್ತ್ರೀ ಅಥವಾ ಪುರುಷರಿಗೆ ಸ್ವಭಾವ ವಿರೋಧವಾದ ಕೆಲಸಗಳಾದ, ಅಡಿಗೆ ಕೆಲಸ ಮನೆ ಶುಚಿಗೊಳಿಸುವ ಕೆಲಸ, ತೋಟದ ಕೆಲಸಗಳಿಗೆ, ಭಾಗಿಗಳಾಗಿ ಮಾಡುತ್ತೇವೆ. ದೇವರ ಪ್ರಕಟಣೆಯಿಂದಾಗಲೀ, ಅಥವಾ ಅಸ್ವಾಭಾವಿಕ ಕಾರ್ಯಗಳನ್ನು ಮಾಡಲು ಯಾರಿಗೂ ಒತ್ತಾಯ ಮಾಡಬಾರದು.

ಬಲವುಳ್ಳ ಪುರುಷರಂತೆ, ಒಂದು ಗುಂಪಿನ ಸ್ತ್ರೀಯರು ಇರದೆ ಇದ್ದರು (1 ಪೇತ್ರ 3:7) ಪುರುಷರು ಮಾಡುವಂತ ಕೆಲಸಗಳನ್ನು ಸ್ತ್ರೀಯರು ಮಾಡಲು ಅಶಕ್ತರು ಎಂದು ತಿಳಿಯಬಾರದು. ಅದೇ ರೀತಿಯಲ್ಲಿ ಸಾಮಾನ್ಯವಾಗಿ ಸ್ತ್ರೀಯರಿಗೆ ಸೀಮಿತವಾದ ಕೆಲವು ಚಾತುರ್ಯದ ಕಾರ್ಯಗಳನ್ನು ಪುರುಷರು ಮಾಡುವರು ಎಂದು ಭಾವಿಸಬಾರದು.

ಬಹುಶಃ ಪುರುಷರ ಬಾಹ್ಯ ಲಕ್ಷಣವು ಅವರನ್ನು ದೇವರು ನಾಯಕರನ್ನಾಗಿ ಮಾಡಿರುವನು ಎಂಬುದಕ್ಕೆ ಸೂಚನೆಯಾಗಿರಬಹುದು. ಪುರುಷರು ಬಲವಾದ, ಹಾಗೂ ಅಧಿಕಾರದ ಸ್ವರವನ್ನು ಹೊಂದಿರುತ್ತಾರೆ. ಹೇಗೂ ಅವರ ಬಲವಾದ ಮೈಕಟ್ಟು ಹಾಗೂ ದೈಹೀಕ ಸಹಿಸುವಿಕೆಯನ್ನು ಹೊಂದಿರುತ್ತಾರೆ. ಈ ದಿನಗಳ ತಾಂತ್ರಿಕತೆಯು ಒಂದು ವರವಾಗಿ ಪರಿಣಮಿಸಿ, ಅವರ ದೈಹೀಕ ಗುಣಮಟ್ಟವನ್ನು ನಾಯಕತ್ವ ಸಿದ್ಧಪಡಿಸಿರುತ್ತದೆ.

ಸಮೂಹದಲ್ಲಿ ನಮೂದಾಗಿರುವ ಪಾತ್ರಗಳನ್ನು ಬದಲಿಸಿಕೊಳ್ಳಲು ಸ್ತ್ರೀ ಪುರುಷರಿಗೆ ಎಲ್ಲಾ ವಿಧವಾದ ಹಕ್ಕುಗಳುಂಟು. ಕ್ರೈಸ್ತರಿಗೆ ಸಂಪ್ರದಾಯಗಳನ್ನು ತೊಡೆದು ಹಾಕುವ ಹಕ್ಕುಗಳು ಇವೆ ಎಂದು ತಿಳಿದು, ಅವುಗಳನ್ನು ಪಾಲಿಸುವುದು ಅವಿವೇಕವಾಗುತ್ತದೆ. ಒಬ್ಬ ಕ್ರೈಸ್ತನ ಅವಿಧೇಯ ಕ್ರಿಯೆಗಳು, ಕ್ರಿಸ್ತನ ಸೇವಾಕಾರ್ಯಕ್ಕೆ ತೊಡಕು ಉಂಟುಮಾಡುವದಾದರೆ, ದೇವರ ಚಿತ್ತವನ್ನು ಉಲ್ಲಂಘನೆ ಮಾಡುವವರಾಗಿರುತ್ತಾರೆ. ಇತರರಿಗೆ ನಷ್ಟವುಂಟಾಗುವ ಹಾಗೆ ಕ್ರೈಸ್ತರು ತಮ್ಮ ಸ್ವಾತಂತ್ರವನ್ನು ಉಪಯೋಗಿಸುವದಾದರೆ, ನಮ್ಮ ಕ್ರೈಸ್ತ ಸ್ವಾತಂತ್ರವನ್ನು ಒಪ್ಪಿಸಿಬಿಡಬೇಕಾಗುತ್ತದೆ (1 ಕೊರಿಂಥ 9:19-23). ಮುಖ್ಯವಾಗಿ ಅದು ನನ್ನ ಸಹೋದರನಿಗೆ ವಿಘ್ನವಾದರೆ, ಪೌಲನು ತಿಳಿಸುವುದು "ಮಾಂಸ ತಿನ್ನುವದನ್ನಾಗಲಿ ದ್ರಾಕ್ಷಾರಸ ಕುಡಿಯುವದನ್ನಾಗಲಿ ನಿನ್ನ ಸಹೋದರನಿಗೆ ಅಡ್ಡಿಯನ್ನುಂಟುಮಾಡುವ ಬೇರೆ ಯಾವುದನ್ನಾಗಲಿ ಬಿಟ್ಟು ಬಿಡುವದೇ ಒಳ್ಳೇದು" (ರೋಮಾಪುರ 14:21).

## ಮುಕ್ತಾಯ

ಸ್ತ್ರಿ ಪುರುಷರ ಕುರಿತಾದ ಸಕಲ ಸಂಬಂಧಗಳು ಹಾಗೂ ಜವಾಬ್ದಾರಿಗಳು ದೇವರ ಸೃಷ್ಟಿಯ ಉದ್ದೇಶದ ನಿಯಮಗಳನ್ನೇ ಪಾಲಿಸುವಂಥದ್ದಾಗಿರಬೇಕು. ಸ್ತ್ರೀಪುರುಷರ ಬಾಹ್ಯ ಲಕ್ಷಣಗಳಿಗೆ ಹೋಲುವಂತೆ ಕಾರ್ಯಗಳನ್ನು ನಿರ್ವಹಿಸಬೇಕು. ಇತರ ವಿಷಯಗಳನ್ನು ದೇವರ ಪ್ರಕಟಣೆಯ ಮೂಲಕ ಕಲಿಯಬೇಕು.